ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2117/2019

ಚಾಸಾ:17 ಪ್ರಾಸಾ:9

ದಿನಾಂಕ: 16.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಹಮ್ಮದ್ ರಫೀಕ್ |
| ತಂದೆಯ ಹೆಸರು | : | ಜೈನುದ್ದೀನ್ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಸಾಕ್ಷಿಗೆ ನಿಪಿ-3, 4ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-3(ಸಿ) ಮತ್ತು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-6 ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ಸಹಿಗಳನ್ನು ಪ್ರಾಸಿಯ ಎ1 ಸರ್ವಿಸ್ ಎದುರು ದಿ: 21-04-2019 ರಂದು ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ-16 ರವರು ಇದ್ದರು. ಜಾಗವನ್ನು ಚಾಸಾ-2 ರವರು ತೋರಿಸಿರುತ್ತಾರೆ. ಸಾಕ್ಷಿ ನಿಪಿ-8 ಮತ್ತು 28 ರಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಸ್ ಜಿ ಎಸ್ ರವರಿಂದ:</u>**

ಮೇಲೆ ಗುರುತಿಸಿದ ದಾಖಲೆಗಳನ್ನು ಯಾರು ಎಲ್ಲಿ ಬರೆದರು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ನಕ್ಷೆಯನ್ನು ಯಾರು ಬಿಡಿಸಿದ್ದು ಎಂದು ನಾನು ನೋಡಿಲ್ಲ. ನಾನು ಸ್ಥಳಕ್ಕೆ ಚಾಸಾ-16 ರವರು ಕರೆದ ಮೇರೆಗೆ ಹೋಗಿರುತ್ತೇನೆ. ನಿಪಿ-3 ಮತ್ತು 4ಕ್ಕೆ ಗಂಗೊಳ್ಳಿ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆಗ ಸಂಜೆ ಸುಮಾರು 7 ಗಂಟೆಯಾಗಿತ್ತು. ಆ ವೇಳೆಗೆ ಅಪಘಾತವಾಗಿ ಎಷ್ಟು ದಿನಗಳಾಗಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಸದ್ರಿ ದಾಖಲೆಗಳಲ್ಲಿ ಏನು ಬರೆದಿದೆ ಹಾಗೂ ಯಾವ ಕಾರಣಕ್ಕಾಗಿ ಜರುಗಿಸಿದ್ದು ಎಂಬ ಬಗ್ಗೆ ನನಗೆ ತಿಳಿಸಿಲ್ಲ.

**<u>ಮರು ವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ